ಜಲವಿದ್ಯುತ್ ಕೇಂದ್ರ ಕುರಿತು

452 - ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ): ಮಾನ್ಯ ಇಂಧನ ಮತ್ತು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಂಷಾ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು?

ಆ) ದಿನಂಪ್ರತಿ ಎಷ್ಟು ಮೆಗಾವ್ಯಾಟ್ಸ್ ವಿದ್ಯುತ್ತು ಅಲ್ಲಿ ಉತ್ಪಾದಿಸಲಾಗುತ್ತಿದೆ?

ಇ) ಇತ್ತೀಚಿನ ದಿವಸಗಳಲ್ಲಿ ಅಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿದೆ ಎಂಬ ವಿಚಾರ ನಿಜವೇ?

ಈ) ನಿಜವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಉ) ಶರಾವತಿ ಜಲವಿದ್ಯುತ್ ಕೇಂದ್ರವು ಯಾವ ವರ್ಷದಲ್ಲಿ ಪ್ರಾರಂಭವಾಯಿತು ಮತ್ತು ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ಎಷ್ಟು?

ಊ) ಈಗ ಅಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುಚ್ಛಕ್ತಿಯ ಪ್ರಮಾಣವೆಷ್ಟು?

ಋ) ಪ್ರತಿದಿನ ಉತ್ಪಾದಿಸಲಾಗುತ್ತಿದ್ದ ವಿದ್ಯುಚ್ಛಕ್ತಿಯ ಪ್ರಮಾಣವು ಕಡಿಮೆಯಾಗಿರುವುದು ನಿಜವೇ?

ೠ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು):

ಅ) 1939ರಲ್ಲಿ ಪ್ರಾರಂಭವಾಯಿತು

ಆ) ಸರಾಸರಿ 16 ಮೆಗಾವ್ಯಾಟ್ಸ್ ವಿದ್ಯುತ್ತು ಉತ್ಪಾದಿಸಲಾಗುತ್ತಿದೆ.

ಇ) 19-1-1994ರಿಂದ 8-3-1994ರವರೆಗೆ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಯಾಗಿತ್ತು.

ಈ) ಎರಡನೇ ಜನರೇಟರ್‌ಗೆ ಜೋಡಿಸಲ್ಪಟ್ಟಿರುವ ಟರ್ಬೈನ್ ಮುರಿತಕ್ಕೆ ಒಳಪಟ್ಟಿದ್ದುರಿಂದ ವಿದ್ಯುಚ್ಛಕ್ತಿ ಉತ್ಪಾದನೆಯು ಕಡಿಮೆಗೊಂಡಿತ್ತು. ಮುರಿತ ಕಾರ್ಯವನ್ನು 8-3-94ರಂದು ಪೂರ್ಣಗೊಳಿಸಿ ಸದರೀ ಜನರೇಟರ್ ಟರ್ಬೈನನ್ನು ಸರಿಪಡಿಸಲಾಗಿದೆ.

ಉ) ಶರಾವತಿ ಜಲವಿದ್ಯುತ್ ಕೇಂದ್ರವು 1964ನೇ ವರ್ಷದಲ್ಲಿ ಪ್ರಾರಂಭವಾಯಿತು. ಅದರ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯ ವರ್ಷಕ್ಕೆ 4300 ಮಿಲಿಯನ್ ಯೂನಿಟ್ಸ್‌ಗಳು.

ಊ) 1993-94ನೇ ಇಸವಿಯ ಫೆಬ್ರವರಿ ತಿಂಗಳ ಅಂತ್ಯದವರೆಗೆ ಒಟ್ಟು 4338 ಮಿಲಿಯನ್ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದ್ದು ಅದು ಈ ವರ್ಷದಲ್ಲಿ ಇಲ್ಲಿಯವರೆಗೆ ಹಾಕಿಕೊಂಡಿದ್ದು ನಿರ್ದಿಷ್ಟ ಗುರಿಯಾದ 4231 ಮಿಲಿಯನ್ ಯೂನಿಟ್ಸ್‌ಗಿಂತ ಹೆಚ್ಚಾಗಿದ್ದು ಗುರಿಗಿಂತ ಹೆಚ್ಚು ಉತ್ಪಾದನೆಯನ್ನು ಮಾಡಲಾಗಿದೆ. ಅಂದರೆ 107 ಮಿಲಿಯನ್ ಯೂನಿಟ್ ಉತ್ಪಾದನೆ ಹೆಚ್ಚಿದೆ.

ಋ) ಮೇಲೆ ತಿಳಿಸಿರುವಂತೆ ಉತ್ಪಾದನೆಯ ಪ್ರಮಾಣ ಕಡಿಮೆಯಾಗಿಲ್ಲ.

ೠ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿರುವ ಮುಖ್ಯ ಅಭಿಯಂತರರುಗಳ ಹುದ್ದೆಗಳ ಕುರಿತು

451 - ಶ್ರೀ ಕೆ. ಲಕ್ಷ್ಮಣ (ರಾಜಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯಲ್ಲಿ ಇರುವ ಒಟ್ಟು ಮುಖ್ಯ ಇಂಜನಿಯರ್‌ಗಳ ಹುದ್ದೆಗಳೆಷ್ಟು?

ಬ) ಆ ತಾಲೂಕಿಗೆ ಅಷ್ಟು ಮುಖ್ಯ ಇಂಜಿನಿಯರ್ ಹುದ್ದೆಗಳ ಅವಶ್ಯಕತೆ ಇದೆಯೇ?

ಇ) ಇದ್ದಲ್ಲಿ, ಅವರುಗಳಿಗೆ ಸಮರ್ಪಕವಾಗಿ ಕಾರ್ಯಭಾರವನ್ನು ವಂಚಿಸಲಾಗಿದೆಯೇ?

ಈ) ಅಷ್ಟೊಂದು ಮುಖ್ಯ ಇಂಜಿನಿಯರ್‌ಗಳು ಇದ್ದರೂ ಕೂಡ ತಾಲೂಕಿನಲ್ಲಿ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟದಲ್ಲಿ ಇರದೇ ಇರಲು ಕಾರಣಗಳೇನು?

ಉ) ಮುಖ್ಯ ಇಂಜಿನಿಯರ್‌ಗಳ ಹುದ್ದೆಗಳಲ್ಲಿ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗಿದೆಯೇ?

ಊ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) 03

ಆ) ಇದೆ

ಇ) ಹೌದು

ಈ) ಅವರ ಕಾರ್ಯದಕ್ಷತೆಯು ನಿರೀಕ್ಷಿತ ಮಟ್ಟ ತಲುಪಿಲ್ಲವೆಂಬ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಮೀಸಲಾತಿ ನಿಯಮಾವಳಿಯು ಮುಖ್ಯ ಇಂಜಿನಿಯರ್ ವೃಂದಕ್ಕೆ ಅನ್ವಯಿಸುವುದಿಲ್ಲ.

ಊ) [illegible]

ಕಲಘಟಗಿ ತಾಲ್ಲೂಕಿನಲ್ಲಿ ಸಾಮಿಪಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳನ್ನು ಕುರಿತು

490 - ಶ್ರೀ ಪಿ.ಸಿ. ಸಿದ್ದನ ಗೌಡರ (ಕಲಘಟಗಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ತಾಲ್ಲೂಕು ಸಾಮಿಪಳ್ಳಿ ಮತ್ತು ಸೋಮನಕೊಪ್ಪ ನೀರಾವರಿ ಯೋಜನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗಿದೆ?

ಆ) ಇದರಿಂದ ಒಟ್ಟು ಎಷ್ಟು ಎಕರೆಯ ಪ್ರದೇಶಕ್ಕೆ ನೀರಾವರಿ ಆಗುತ್ತದೆ?

ಇ) ಈ ಯೋಜನೆಗಳಿಗೆ ಬೇಕಾದಂಥ ಭೂಮಿಯನ್ನು ರೈತರುಗಳಿಂದ ಸ್ವಾಧೀನಪಡಿಸಿಕೊಳ್ಳಲಾಗಿದೆಯೇ ಹಾಗೂ ಇಲ್ಲಿಯವರೆಗೆ ಈ ನೀರಾವರಿ ಕಾಮಗಾರಿಗಳಿಗೆ ಎಷ್ಟು ಹಣ ಖರ್ಚಾಗಿದೆ?

ಈ) ಈ ಯೋಜನೆಯನ್ನು ಯಾವಾಗ ಮುಗಿಸಬೇಕಾಗಿತ್ತು ಹಾಗೂ ಇದು ವಿಳಂಬವಾಗಿರುವುದಕ್ಕೆ ಕಾರಣವೇನು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) 10.324 ಲಕ್ಷ ರೂ.ಗಳ ಅಂದಾಜುಪಟ್ಟಿಗೆ ಸರ್ಕಾರದಿಂದ ದಿನಾಂಕ 16-6-1973ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಪರಿಷ್ಕೃತ ಅಂದಾಜು 175 ಲಕ್ಷ ರೂ.ಗಳಿಗೆ ತಯಾರಿಸಲ್ಪಟ್ಟಿದ್ದು ತಾಂತ್ರಿಕ ಸಮಿತಿಯ ಪರಿಶೀಲನೆಯಲ್ಲಿದೆ.

ಆ) 668 ಎಕರೆ

ಇ) 173 ಎಕರೆ 5 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ) 22.40 ಲಕ್ಷ ರೂ. ಇಲ್ಲಿಯವರೆಗೆ ಖರ್ಚಾಗಿದೆ.